# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 133 (78) |
| ಸದಸ್ಯರ ಹೆಸರು | : | ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 19-12-2022 |
| ಉತ್ತರಿಸುವ ಸಚಿವರು | : | ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಕಲಾವಿದರ ಹಾಗೂ ಸಾಹಿತಿಗಳ ಸಂಖ್ಯೆ ಎಷ್ಟು; | ಕಲಬುರಗಿ ಜಿಲ್ಲೆಯ ಸಾಹಿತಿ ಹಾಗೂ ಕಲಾವಿದರ ಸಂಖ್ಯೆ: – 850.<br>ಯಾದಗಿರಿ ಜಿಲ್ಲೆಯ ಸಾಹಿತಿ ಹಾಗೂ ಕಲಾವಿದರ ಸಂಖ್ಯೆ: – 260. |
| ಆ) | ಕಲಾವಿದರು ಮತ್ತು ಸಾಹಿತಿಗಳಿಗೆ ಮಾಶಾಸನ ನೀಡಲು ಇರುವ ಮಾನದಂಡಗಳೇನು; (ವಿವರ ನೀಡುವುದು) | ಮಾರ್ಗಸೂಚಿಯ ಪ್ರತಿಯನ್ನು ಅನುಬಂಧದಲ್ಲಿರಿಸಿದೆ. |
| ಇ) | ಸದರಿ ಜಿಲ್ಲೆಗಳಲ್ಲಿ ಮಾಶಾಸನ ನೀಡಬೇಕೆಂದು ಇದುವರೆವಿಗೂ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಎಷ್ಟು; ಎಂದಿನಿಂದ ಬಾಕಿ ಇವೆ; (ವಿವರ ನೀಡುವುದು) | 2018-19 ರಿಂದ ಇದುವರೆಗೂ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಸ್ವೀಕೃತವಾದ, ಮಂಜೂರಾದ ಮತ್ತು ಬಾಕಿ ಇರುವ ಅರ್ಜಿಗಳ ವಿವರ ಈ ಕೆಳಗಿನಂತಿದೆ.<br>1) ಕಲಬುರಗಿ<br>ಸ್ವೀಕೃತ ಅರ್ಜಿಗಳು – 35<br>ಮಂಜೂರಾದ ಅರ್ಜಿಗಳು - 31<br>ಬಾಕಿ ಪರಿಶೀಲನೆಯಲ್ಲಿರುವ ಅರ್ಜಿಗಳು – 04<br>2) ಯಾದಗಿರಿ<br>ಸ್ವೀಕೃತ ಅರ್ಜಿಗಳು – 06<br>ಮಂಜೂರಾದ ಅರ್ಜಿಗಳು - 04<br>ಬಾಕಿ ಪರಿಶೀಲನೆಯಲ್ಲಿರುವ ಅರ್ಜಿಗಳು - 02 |
| ಈ) | ಮಾಶಾಸನಕ್ಕೆ ಅರ್ಜಿ ಸಲ್ಲಿಸಿದ ತರುವಾಯ ಎಷ್ಟು ದಿನಗಳಲ್ಲಿ ಮಾಶಾಸನ ಮಂಜೂರು ಮಾಡಲಾಗಿರುತ್ತದೆ ಹಾಗೂ ತಿಂಗಳಿಗೆ ಎಷ್ಟು ರೂ. ಮಾಶಾಸನ ನೀಡಲಾಗುತ್ತಿದೆ? (ವಿವರ ನೀಡುವುದು) | 1) ಮಾಸಾಶನ ಮಂಜೂರಾತಿ ಪ್ರಕ್ರಿಯೆಯು ಈ ಕೆಳಗಿನಂತಿರುತ್ತದೆ.<br>• ಮಾಸಾಶನ ಪಡೆಯಬಯಸುವ ಸಾಹಿತಿ/ಕಲಾವಿದರು ಆಯಾ ಜಿಲ್ಲೆಯ ಸಹಾಯಕ ನಿರ್ದೇಶಕರಿಂದ ನಿಗದಿತ ಅರ್ಜಿ ನಮೂನೆಯನ್ನು ಪಡೆದು, ನಿಯಮಾನುಸಾರ ಭರ್ತಿಮಾಡಿ, ಅಗತ್ಯ ದಾಖಲೆಗಳೊಂದಿಗೆ ಸಹಾಯಕ ನಿರ್ದೇಶಕರಿಗೆ ಸಲ್ಲಿಸಬೇಕು.<br>• ಜಿಲ್ಲಾ ಸಹಾಯಕ ನಿರ್ದೇಶಕರು ಸದರಿ ಅರ್ಜಿ ಮತ್ತು ದಾಖಲೆಗಳನ್ನು ಪರಿಶೀಲಿಸಿ ಕಲಾಪ್ರಕಾರದ ಅನುಸಾರ ವಿಂಗಡಿಸಿ, ಶಿಫಾರಸ್ಸಿನೊಂದಿಗೆ ಆಯಾ ಅಕಾಡೆಮಿಗಳಿಗೆ, ಕಳುಹಿಸಲಾಗುವುದು.<br>• ಅಕಾಡೆಮಿಗಳು ಸ್ವೀಕೃತವಾದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಅವಶ್ಯವಿದ್ದಲ್ಲಿ ಕಲಾವಿದರ ಸಂದರ್ಶನ ನಡೆಸಿ, ಕಲಾವಿದರ ಕಲಾಸೇವೆಯ ಬಗ್ಗೆ ಖಚಿತಪಡಿಸಿಕೊಂಡು, ಅರ್ಜಿಗಳ ಕುರಿತು ತೀರ್ಮಾನಿಸಿ ಸೂಕ್ತ ಶಿಫಾರಸ್ಸಿನೊಂದಿಗೆ ಕೇಂದ್ರ ಕಛೇರಿಗೆ ಕಳುಹಿಸಿಕೊಲಾಗುವುದು. |

